ಕರ್ನಾಟಕ ಸರ್ಕಾರ
ಅರಣ್ಯ ಇಲಾಖೆ

ಕರ್ನಾಟಕ ಅರಣ್ಯ ಇಲಾಖೆ

**ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳ ಕಚೇರಿ, ಕೆನರಾ ವೃತ್ತ, ಶಿರಸಿ – ೫೮೧ ೪೦೨**
**OFFICE OF THE CHIEF CONSERVATOR OF FORESTS, KANARA CIRCLE, SIRSI-581402.**
ದೂರವಾಣಿ **(PHONE)**: 08384-236335, ಇ-ಮೇಲ್ **(e_mail)** : ccfkanaracircle@gmail.com

ಸಂಖ್ಯೆ: ಬಿ2/ಜಿಎಫ್ಎಲ್/Approach Road/CR-34/2022-23 ದಿನಾಂಕ:07-02-2024.

ಗೆ,

ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು,
(ಅರಣ್ಯ ಸಂರಕ್ಷಣೆ) ನೊಡೇಲ್ ಅಧಿಕಾರಿ ಮತ್ತು (ಅಸಂಕಾ)
ಅರಣ್ಯ ಭವನ ಮಲ್ಲೇಶ್ವರಂ 18 ನೇ ಅಡ್ಡ ರಸ್ತೆ
ಬೆಂಗಳೂರು-03.

ಮಾನ್ಯರೆ,

ವಿಷಯ: Diversion of 0.9896 hectare of forest land in Kagal village F.Sy. No.130A. Kumta Hobli and Taluk, uttara Kannada Disitrict (Honavar Forest Division) for construction of Asphalted Approach Road to the proposed Resort (in Patta land) in favour of M/s Biogen Wellness Privatie Ltd, Beerkodi, Kagal village, Kumta Taluk, Uttara Kannada District.

Proposal no: FP/KA/ APPROACH/36720/2018.

ಉಲ್ಲೇಖ:1 ಮಾನ್ಯ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು, (ಅರಣ್ಯ ಸಂರಕ್ಷಣೆ) ಮತ್ತು ನೋಡಲ್ ಅಧಿಕಾರಿ, (ಎಫ್ ಸಿಎ), ಬೆಂಗಳೂರು ರವರ ಕಚೇರಿ ಪತ್ರ ಸಂ:E-office File No.KFD/HOFF/A52K (GFL) /82/2018-FC, ದಿನಾಂಕ: 24-07-2023.

2 ಉಪ ಅರಣ್ಯ ಸಂರಕ್ಷಣಾಧಿಕಾರಿ, ಹೊನ್ನಾವರ ವಿಭಾಗರವರ ಪತ್ರ ಸಂಖ್ಯೆ:ಬಿ2/GFL/FC/ಸಿಆರ್-16/2022-23 ದಿನಾಂಕ:25-01-2024.

ಈ ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಕುಮಟಾ ತಾಲೂಕಿನ ಕಾಗಲ ಅಸನಂ:130ಎ ರಲ್ಲಿ 0.9896 ಹೇ ಅರಣ್ಯ ಪ್ರದೇಶಧ ಮೂಲಕ ಸಂಪರ್ಕ ರಸ್ತೆ ಕಲ್ಪಿಸುವ ಕುರಿತು ಅಂತರಜಾಲದ ಮುಖಾಂತರ ದಾಖಲೆಗಳನ್ನು ಅಳವಡಿಸಿ ಪ್ರಸ್ತಾವನೆಯನ್ನು ಸಲ್ಲಿಸಿದಂತೆ, ಉಪಯೋಗಿ ಸಂಸ್ಥೆಯವರು ಕೇಳಿರುವ ಪ್ರದೇಶವು ಸುಮಾರು ಒಂದು ಹೆಕ್ಟರ್ ಆಗಿರುವುದರಿಂದ ಅರಣ್ಯ ಭೀಮಿಯನ್ನು ಬಿಡುಗಡೆ ಮಾಡಲು ಪರ್ಯಾಯವಾಗಿ ಪರಿಹಾರಾತ್ಮಕ ನೆಡುತೋಪು ಬೆಳೆಸುವ ಕುರಿತು ಪ್ರದೇಶವನ್ನು ಗುರುತಿಸಿ ನಕ್ಷೆ ತಯಾರಿಸಿ ಸಲ್ಲಸಲು ಉಲ್ಲೇಖ (1) ರ ಪತ್ರದಲ್ಲಿ ಸೂಚಿಸಿದಂತೆ.

ವಲಯ ಅರಣ್ಯಾಧಿಕಾರಿ, ಕುಮಟಾ ಹಾಗೂ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ, ಕುಮಟಾ ರವರು ಸ್ಥಳ ಪರಿಶೀಲಿಸಿ, ಉಪಯೋಗಿ ಸಂಸ್ಥೆಯವರು ಕುಮಟಾ ತಾಲೂಕ ಕಾಗಲ ಮಾಸನಂ 133/6 ರಲ್ಲಿ 00-21-08 ಮಾಸನಂ 133/7 ರಲ್ಲಿ 00-11-00, ಮಾಸನಂ 133/8 ರಲ್ಲಿ 01-11-08 ಮತ್ತು 133/9ಬ ರಲ್ಲಿ 00-16-00 ಒಟ್ಟು 02-20-00 ಕ್ಷೇತ್ರದಲ್ಲಿ ಪರಿಹಾರಾತ್ಮಕ ನೆಡುತೋಪು ಬೆಳೆಸಲು ಪ್ರದೇಶವನ್ನು ಗುರುತಿಸಿರುತ್ತಾರೆಂದು ಉಲ್ಲೇಖ (2) ರ ಪತ್ರದ ವರದಿಯಲ್ಲಿ ತಿಳಿಸಿರುತ್ತಾರೆ.

ಮುಂದುವರೆದು ಉಪ ಅರಣ್ಯ ಸಂರಕ್ಷಣಾಧಿಕಾರಿ, ಹೊನ್ನಾವರ ವಿಭಾಗ ರವರು ಪರಿಹಾರಾತ್ಮಕ ನೆಡುತೋಪು ಬೆಳೆಸಲು ಪ್ರದೇಶವನ್ನು ದಿನಾಂಕ:24-01-2024 ರಂದು ಸ್ಥಳ ಪರಿಶೀಲಿಸಿ, ಸದರಿ ಪರಿಹಾರಾತ್ಮಕ ನೆಡುತೋಪು ಬೆಳೆಸಲು ಗುರುತಿಸಿರುವ ಮಾಲ್ಕಿ ಪ್ರದೇಶಕ್ಕೆ ಲಗ್ತ ಕಾಗಾಲ ಅಸನಂ:130 ಇದ್ದು, ಪರಿಹಾರಾತ್ಮಕ ನೆಡುತೋಪು ಬೆಳೆಸಲು ಯೋಗ್ಯವಾಗಿರುತ್ತದೆ ಎಂಬ ವರದಿಯೊಂದಿಗೆ CA land Suitability Certificate, Topo Map, ಮತ್ತು Geo-reference Map ನೊಂದಿಗೆ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

ಕಾರಣ, ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ ಉಪ ಅರಣ್ಯ ಸಂರಕ್ಷಣಾಧಿಕಾರಿ, ಹೊನ್ನಾವರ ವಿಭಾಗ ರವರ ವರದಿಯನ್ನು ಅನುಮೋದಿಸುತ್ತಾ, ಸದರಿ ಪ್ರಸ್ತಾವನೆಯನ್ನು ಈ ಪತ್ರದೊಂದಿಗೆ ಲಗ್ತಟ್ಟು ಮುಂದಿನ ಕ್ರಮಕ್ಕಾಗಿ ತಮ್ಮಲ್ಲಿ ಗೌರವಪೂರ್ವಕ ಸಲ್ಲಿಸಿದೆ.

ತಮ್ಮ ನಂಬುಗೆಯ,

ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ,
ಕೆನರಾ ವೃತ್ತ, ಶಿರಸಿ.

ಪ್ರತಿಯನ್ನು ಉಪ ಅರಣ್ಯ ಸಂರಕ್ಷಣಾಧಿಕಾರಿ, ಹೊನ್ನಾವರ ವಿಭಾಗ, ಹೊನ್ನಾವರ ರವರಿಗೆ ಮಾಹಿತಿಗಾಗಿ ಕಳುಹಿಸಿದೆ.

ರವಾನಿಸಿದ ತಾರೀಖು 12/2/24
ಸಹಿ: ...